ಇ) 1) ಜೀಪ್ ಸೌಲಭ್ಯವಿಲ್ಲದೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ರೂ. 200-00

2) ಚೀಪ್ ಸೌಲಭ್ಯವಿಲ್ಲದ ಸಹಾಯಕ ಶಿಕ್ಷಣಾಧಿಕಾರಿಗೆ ರೂ. 200-00

3) ಪದವೀಧರ ಶಾಲಾ ತನಿಖಾಧಿಕಾರಿಗಳಿಗೆ ರೂ. 100-00

ಮಾಸಿಕ ಪ್ರವಾಸಭತ್ಯೆಯನ್ನು ನಿಗಧಿಪಡಿಸಲಾಗಿದೆ.

ಈ) ಪ್ರವಾಸಭತ್ಯೆ ಕೊಡುವುದನ್ನು ನಿಲ್ಲಿಸದೆ ಇದ್ದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ರಾಜ್ಯದಲ್ಲಿ 190 ಕ್ಷೇತ್ರ ಶಿಕ್ಷಣಾಧಿಕಾರಿಗಳಿದ್ದಾರೆ ಇವರಲ್ಲಿ 145 ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಾಹನ ಒದಗಿಸಲಾಗಿದೆ.

ಊ) ವಾಹನ ಹಂಚಿಕೆಯಾಗಿರುವಲ್ಲಿ ಚಾಲಕರ ಹುದ್ದೆಯನ್ನು ಸಹ ಮಂಜೂರು ಮಾಡಲಾಗಿದೆ. ಇದುವರೆವಿಗೂ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳದಿದ್ದಲ್ಲಿ ಅಂತಹ ಬಿ.ಇ.ಓ.ಗಳು ನಿಯಮಾನುಸಾರ ನಿಗಧಿತ ಪ್ರಭಾಸಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

ಋ) ತೀರ್ಥಹಳ್ಳಿಯ ಬಿ ಇ ಒ ಕಚೇರಿಯ ವಾಹನ ಚಾಲಕರನ್ನು ನೇಮಕಾತಿ ಮಾಡುವ ಅಧಿಕಾರವು ಶಿವಮೊಗ್ಗ ಜಿಲ್ಲಾ ಉಪನಿರ್ದೇಶಕರಿಗೆ ಇರುತ್ತದೆ. ಈ ನೇಮಕಾತಿ ಮಾಡುವ ಬಗ್ಗೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಶೀಘ್ರದಲ್ಲಿ ನೇಮಕಾತಿ ಮಾಡಲಾಗುವುದು.

ಕೊಡಗು ಜಿಲ್ಲಾ ಪಂಚಾಯಿತಿಯಿಂದ ಆಸ್ಪತ್ರೆಗಳಿಗೆ ಔಷಧಿ ಸರಬರಾಜು.

1543 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲಾ ಪಂಚಾಯತಿ ವತಿಯಿಂದ ಆಸ್ಪತ್ರೆಗಳಿಗೆ ಎಷ್ಟು ಮೊತ್ತದ ಔಷಧವನ್ನು ಸರಬರಾಜು ಮಾಡಲಾಗಿದೆ?

ಆ) ಯಾವ ಯಾವ ಆಸ್ಪತ್ರೆಗಳಿಗೆ ಎಷ್ಟು ಎಷ್ಟು ಔಷಧಿಗಳನ್ನು ಸರಬರಾಜು ಮಾಡಲಾಗಿದೆ? (ವಿವರವಾಗಿ ತಿಳಿಸುವುದು)

ಇ) ಸೋಮವಾರ ಪೇಟೆ ಆಸ್ಪತ್ರೆಗೆ ಎಷ್ಟು ಮೊತ್ತದ ಔಷಧಿ ಬಿಡುಗಡೆ ಮಾಡಲಾಗಿದೆ? (ವಿವರ ನೀಡುವುದು)

ಡಾ|| ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರೂ. 9,68,000-00

ಆ) ಪಟ್ಟಿ ಲಗತ್ತಿಸಿದೆ.

ಇ) 1997-98ನೇ ಸಾಲಿನಲ್ಲಿ ಒಟ್ಟು ರೂ. 1,99,988-00 ಮೌಲ್ಯದ ಔಷಧಿಗಳನ್ನು ಸರಬರಾಜು ಮಾಡಲಾಗಿದೆ.

STATEMENT SHOWING THE SUPPLY OF DRUGS TO THE FOLLOWING INSTITUTION OF KODAGU DISTRICT FOR THE YEAR 1998-99.

Sl. No.	Name of the Institution		Amount
1	2	3	4
1.	General Hospital	Kushalanagar	80,000-00
2.	General Hospital,	Gonikoppa	80,000-00
3.	Community Health Centre	Sanivardhasanthe	60,000-00
4.	Community Health Centre	Pollibetta	60,000-00
5.	Primary Health Centre	Kutta	30,000-00
6.	Primary Health Centre	srimangala	26,000-00
7.	-do-	Birunani	26,000-00
8.	-do-	Hudhikeri	26,000-00
9.	-do-	Ballele	26,000-00
10.	-do-	Suntikoppa	30,000-00
11.	-do-	Shanthalli	26.000-00
12.	-do-	Kodlipete	26,000-00
13.	-do-	Heballe	26,000-00
14.	-do-	Bagamandala	30,000-00
15.	-do-	Manardu	26,000-00
16.	-do-	Sampajee	26,000-00
17.	-do-	Madhapura	26,000-00
18.	-do-	Jayandani	26,000-00
19.	-do-	Bettahalli	26,000-00
20.	-do-	Kuttandi	26,000-00
21.	-do-	Kanangala	26,000-00
22.	-do-	Maldare	26,000-00
23.	-do-	-	26,000-00

1	2	3	4
24.	-do-	Cherambani	26,000-00
25.	-do-	Goudalli	26,000-00
26.	-do-	Kudagi	26,000-00
27.	-do-	Baligeri	26,000-00
28.	-do-	Chennanakote	26,000-00
29.	-do-	Allur Siddapura	26,000-00
30.	-do-	Suralabbi	26,000-00
31.	Primary Health Unit	Siddapura	60,000-00
32.	-do-	Kanuru	16,000-00
33.	-do-	Sirangalla	16,000-00
34.	-do-	Nanjarayapattanna	16,000-00

ಸ್ವಸ್ಥಿ ಗ್ರಾಮ ಯೋಜನೆ.

1544 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸ್ವಸ್ತಿ ಗ್ರಾಮ ಯೋಜನೆಯಡಿಯಲ್ಲಿ1997-98ರ ಸಾಲಿನಲ್ಲಿ ಅಭಿವೃದ್ಧಿಗೊಳಿಸಿದ ಇಪ್ಪತ್ತು ಗ್ರಾಮಗಳು ಯಾವುವು, ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಇಲ್ಲಿ ಹಮ್ಮಿಕೊಳ್ಳಲಾಗಿದೆ (ವಿವರಗಳನ್ನು ನೀಡುವುದು)?*

ಆ) *ಈ ವರ್ಷ ಸ್ವಸ್ತಿ ಗ್ರಾಮ ಯೋಜನೆಯಡಿಯಲ್ಲಿ ಅಭಿವೃದ್ಧಿಗಾಗಿ ನೂರು ಗ್ರಾಮಗಳನ್ನು ತೆಗೆದುಕೊಳ್ಳುವುದಾಗಿ ಆಯವ್ಯಯದಲ್ಲಿ ತಿಳಿಸಲಾಗಿದ್ದು ಅವು ಯಾವುವು?*

ಇ) *ಸ್ವಸ್ತಿ ಹಳ್ಳಿಗಳಿಗೆ ಎಷ್ಟು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ವಿವರ ನೀಡುವುದು)?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) 20 ಗ್ರಾಮಗಳ ಪಟ್ಟಿ ಲಗತ್ತಿಸಿದೆ. (ಅನುಬಂಧ) ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳು (ರಸ್ತೆಗಳು, ಶಾಲೆಗಳು, ಆಸ್ಪತ್ರೆಗಳು, ವಸತಿ, ಮರಗಳು, ನೀರು, ನೈರ್ಮಲ್ಯ, ಭೂಸಾರ ಸಂರಕ್ಷಣೆಯಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸದರಿ ಯೋಜನೆ ಉದ್ಘಾಟನೆಯಾದ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದೆ.